ಈ ಯೋಜನೆಯ ಆರ್ಥಿಕ ಮಾದರಿಯು ಕೆಳಕಂಡಂತೆ ಇದೆ.

1)	ಎಲ್.ಐ.ಸಿ ಯಿಂದ ಸಾಲ	ರೂ. 700-00 ಲಕ್ಷ
2)	ಸರ್ಕಾರದಿಂದ ಸಾಲ	ರೂ. 280-00 ಲಕ್ಷ
3)	ಮಂಗಳೂರು ಮಹಾನಗರ ಪಾಲಿಕೆ ವತಿಯಿಂದ	ರೂ. 210-00 ಲಕ್ಷ
4)	ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ	ರೂ. 210-00 ಲಕ್ಷ
	ಒಟ್ಟು	ರೂ. 1400-00 ಲಕ್ಷ

ಮಂಗಳೂರು ಮಹಾಗನರಪಾಲಿಕೆ ಮತ್ತು ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ ತಮ್ಮ ಭಾಗದ ಹಣವನ್ನು ಪರಿವತಿಸಿದ ನಂತರ ಜೀವ ವಿಮಾ ನಿಗಮದಿಂದ ಸಾಲವನ್ನು ಪಡೆದುಕೊಂಡು ಈ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗುವುದು.

ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಇರತಕ್ಕ ಕೊಳಚೆ ಪ್ರದೇಶಗಳು

818 - ಶ್ರೀ ಯೋಗೇಶ್ ಭಟ್ (ಮಂಗಳೂರು ಕ್ಷೇತ್ರ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) *ಮಂಗಳೂರು ಮಹಾಗನರ ಪಾಲಿಕೆಯಲ್ಲಿ ಎಷ್ಟು ಕೊಳಚೆ ಪ್ರದೇಶವನ್ನು ಕರ್ನಾಟಕ ಕೊಳಚೆ ಪ್ರದೇಶ ನಿರ್ಮೂಲನ ಮಂಡಳಿಯು ಕೈಗೆತ್ತಿಕೊಂಡಿದೆ ಹಾಗೂ ಇದರ ಅಭಿವೃದ್ಧಿ ಬಗ್ಗೆ ಏನು ಕ್ರಮ ಕೈಗೊಂಡಿದೆ.*

ಆ) *ಮಂಗಳೂರು ಮಹಾನಗರ ಮಧ್ಯ ಭಾಗದಲ್ಲಿರುವ ಡೊಂಗರ ಕೇರಿ ಸರ್ವೆ ನಂ. 450 ರಲ್ಲಿರುವ ಕೊಳಚೆ ಪ್ರದೇಶವನ್ನು ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಯು ಕೈಗೆತ್ತಿಕೊಂಡು ಅಲ್ಲಿರುವ ಎಷ್ಟು ಮನೆಯವರಿಗೆ ನೊಂದಣಿ ಪತ್ರ ಕೊಟ್ಟಿರುತ್ತದೆ. ಮತ್ತೆ ಆ ಪ್ರದೇಶದ ಅಭಿವೃದ್ಧಿಗಾಗಿ ಕೈಗೊಂಡ ಕ್ರಮಗಳೇನು?*

ಇ) *ಪ್ರಸ್ತುತ ಈ ನೊಂದಾಯಿತ ಮನೆಗಳು ಕೊಳಚೆ ನಿರ್ಮೂಲನ ಮಂದಳಿಯ ವ್ಯಾಪ್ತಿಯಲ್ಲಿ ಇದೆಯ? ಇಲ್ಲದಿದ್ದಲ್ಲಿ ಯಾವ ಕಾರಣಕ್ಕಾಗಿ ಮತ್ತು ಯಾರ ಆಜ್ಞೆಯ ಮೇಲೆ ಇದನ್ನು ಹೊರತು ಪಡಿಸಲಾಗಿದೆ.*

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಒಟ್ಟು 10 ಕೋಟಿ ಕೊಳಚೆ ಪ್ರದೇಶಗಳು ಇರುತ್ತವೆ. ಈ ಪೈಕಿ 5 ಕೊಳಚೆ ಪ್ರದೇಶಗಳಲ್ಲಿ ಅಭಿವೃದ್ಧಿ ಕಾಮಗಾರಿಗಳಾದ ರಸ್ತೆ, ಬೀದಿ ದೀಪ, ಚರಂಡಿ, ಚರಂಡಿ, ಕೊಳವೆ ಬಾವಿ ಇವುಗಳನ್ನು ರೂ. 5,32,000-00 ಗಳ ವೆಚ್ಚದಲ್ಲಿ ಕೈಗೊಳ್ಳಲಾಗಿದೆ.

ಆ) ಮಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿರುವ ಡೊಂಗರ ಕೇರಿ ಕೊಳಚೆ ಪ್ರದೇಶಗಳ (ಅಭಿವೃದ್ಧಿ ಮತ್ತು ನಿರ್ಮೂಲನೆ) ಕಾಯ್ದೆ 1973ರ ಪ್ರಕಾರ ಘೋಷಿತ ಕೊಳಚೆ ಪ್ರದೇಶವಾಗಿದ್ದು, ಇಲ್ಲರುವ 100 ಮನೆಗಳಿಗೆ ಪರಿಚಯ ಪತ್ರಗಳನ್ನು ಕೊಡಲಾಗಿದೆ ಮತ್ತು ಈ ಪ್ರದೇಶದಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಮುಂದಿನ ಸಾಲಿನಲ್ಲಿ ತೆಗೆದುಕೊಳ್ಳಲಾಗುವುದು.

3. ಈ ಕೊಳಚೆ ಪ್ರದೇಶದ ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಯ ವ್ಯಾಪ್ತಿಯಲ್ಲೇ ಇರುತ್ತದೆ.

ದ.ಕ. ಜಿಲ್ಲೆಯ ಪುತ್ತೂರು ಪುರ ಭವನದ ನಿರ್ಮಾಣಕ್ಕೆ ಧನ ಸಹಾಯ

478 - ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) : ಮಾನ್ಯ ನಗರಾಭಿವೃದ್ಧಿ ಮತ್ತು ಕಾಡಾ ಮತ್ತು ಹೈದ್ರಾಬಾದ ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು, ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲಾ ಪುತ್ತೂರು ಪುರಸಭೆಯ ಪುರಭವನ ನಿರ್ಮಾಣಕ್ಕೆ ಸರ್ಕಾರ ಸಹಾಯ ಧನ ಕೊಡಲು ಒಪ್ಪಿರುವುದು ನಿಜವೇ, ಹಾಗೆ ಒಪ್ಪಿದಲ್ಲಿ ಕೊಡಲು ಒಪ್ಪಿದ ಮೊತ್ತ ಎಷ್ಟು? ಮತ್ತು ಹಾಗೆ ಕೊಡಲೊಪ್ಪಿದ ಮೊತ್ತವನ್ನು ಕೊಡದಿರಲು ಕಾರಣವೇನು?

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಕಾಡಾ ಮತ್ತು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು.)

ಅ) ಇಲ್ಲ. ಮುಂದಿನ ಪ್ರಶ್ನೆಗಳು ಉದ್ಭವಿಸುವುದಿಲ್ಲ.

ಪುತ್ತೂರು ತಾಲ್ಲೂಕಿನಲ್ಲಿ ಆಶ್ರಯ ಯೋಜನೆಯಲ್ಲಿ ಗುರುತಿಸಿರುವ ಫಲಾನುಭವಿಗಳ ಬಗ್ಗೆ

472 - ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) : ಮಾನ್ಯ ವಸತಿ ರಾಜ್ಯ ಸಚಿವರು ಈ ಕೆಲಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲಾ ಪುತ್ತೂರು ತಾಲ್ಲೂಕಿನ ಆಶ್ರಯ ಯೋಜನೆ ಯಡಿಯಲ್ಲಿ ಫಲಾನುಭವಿಗಳನ್ನು ಗುರುತಿಸುವ ಬಗ್ಗೆ ಸಮಿತಿಗಳನ್ನು ರಚಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ ಹಾಗೆ ಇರುವದಾದಲ್ಲಿ ಸಮಿತಿಗೆ ಆಯ್ಕೆ ಮಾಡಲು ಯಾವ ನಿಯಮಾವಳಿಗಳನ್ನು ನಿರೂಪಿಸಲಾಗುವುದು?

ಶ್ರೀ ಬಸವರಾಜ ರಾಯರೆಡ್ಡಿ (ವಸತಿ ರಾಜ್ಯ ಸಚಿವರು) :

ಅ) ಆಶ್ರಯ ಟಾಸ್ಕ ಫೋರ್ಸ ಸಮಿತಿಗಳು ಈಗ ಅಸ್ಥಿತ್ವದಲ್ಲಿ ಇಲ್ಲ. ಉಪ ವಿಭಾಗಾಧಿಕಾರಿಗಳಿಗೆ ಫಲಾನುಭವಿಗಳನ್ನು ಗುರುತಿಸುವ ಅಧಿಕಾರವನ್ನು ನೀಡಲಾಗಿದೆ. ಇದರ ಜೊತೆಗೆ ಫಲಾನುಭವಿಗಳನ್ನು ಗುರುತಿಸುವ ಒಂದು ಸಮಗ್ರ ಸಮೀಕ್ಷೆಯನ್ನು ನಡೆಸಲಾಗುತ್ತಿದೆ. ಸಮೀಕ್ಷೆ ಪಟ್ಟಿಯನ್ನು ಆಧರಿಸಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುವುದು.

ರಾಜ್ಯದಲ್ಲಿ ಪರಿಶಿಷ್ಟ ವರ್ಗ ಹಾಗೂ ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸುವ ಬಗ್ಗೆ

625 - ಶ್ರೀ ಕೆ.ಎನ್. ನಾಗೇಗೌಡ (ಕಿರುಗಾವಲು) : ಮಾನ್ಯ ಸಮಾಜ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಮುಂದಿನ ವರ್ಷ ಎಷ್ಟು ಪರಿಶಿಷ್ಟಜಾತಿ, ಪರಿಶಿಷ್ಟ ವರ್ಗ ಹಾಗೂ ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯಗಳನ್ನು ರಾಜ್ಯ ಸರ್ಕಾರದವರು ಪ್ರಾರಂಭಿಸುವರು?

ಆ) ಕಿರುಗಾವಲು ವಿಧಾನ ಸಭಾ ಕ್ಷೇತ್ರದಲ್ಲಿ ವಿದ್ಯಾರ್ಥಿನಿಲಯವನ್ನು ತೆರೆಯುವಷ್ಟು ವಿದ್ಯಾರ್ಥಿಗಳ ಸಂಖ್ಯೆ ಇದೆಯೇ ; ಹಾಗಿದ್ದಲ್ಲಿ ಸರ್ಕಾದವರು ಮಂಜೂರಾತಿ ಮಾಡಲಾಗುವುದೇ?

ಶ್ರೀ ರಮೇಶ್. ಸಿ. ಜಿಗಜಿಣಗಿ (ಸಮಾಜ ಕಲ್ಯಾಣ ಸಚಿವರು) :

ಅ) ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳಿಗೆ 79 ವಿದ್ಯಾರ್ಥಿನಿಲಯಗಳನ್ನು ಹಾಗೂ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾಂತರ